# Job description of Project Associate in Chitradurga and Tumkur, Karnataka, India

S3IDF
No.18, 1st Floor,
8th Cross, 23rd Main,
SCHBCS Layout, Opp.
R V Dental College,
J P Nagar 2nd Phase,
Bangalore 560078
India

+91 080 26594880
info@S3IDF.org
www.S3IDF.org

**S3IDF-ಇಂಡಿಯಾವು ಒಂದು ಅಂತರರಾಷ್ಟ್ರೀಯ ಲಾಭ-ರಹಿತ ಸಂಸ್ಥೆಯಾಗಿದೆ. ಈ ಸಂಸ್ಥೆಯು, ಸಮಾನ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಉತ್ತೇಜಿಸುತ್ತದೆ. ಪ್ರಸ್ತುತ 2-3 ವರ್ಷಗಳಲ್ಲಿ, ಈ ಸಂಸ್ಥೆಯು ತನ್ನ ಕಾರ್ಯದ ಗಮನ, ಕೃಷಿಯಾಧಾರಿತ ಜೀವನೋಪಾಯ ಪರಿಹಾರಗಳು ಮತ್ತು ತ್ಯಾಜ್ಯಾಧಾರಿತ ಜೀವನೋಪಾಯ ಪರಿಹಾರಗಳ ಕುರಿತಾಗಿದೆ. ಇದನ್ನು ಸಾಧಿಸಲು, S3IDF-ಇಂಡಿಯಾವು ಸ್ಥಳೀಯ ಸರ್ಕಾರೇತರ ಸಂಸ್ಥೆಗಳು, ಸರ್ಕಾರಿ ಸಂಸ್ಥೆಗಳು, ಉಪಕರಣಗಳು / ತಂತ್ರಜ್ಞಾನ ಪೂರೈಕೆದಾರರು ಮತ್ತು ಹಣಕಾಸು ಸಂಸ್ಥೆಗಳೊಂದಿಗೆ ಪಾಲುದಾರಿಕೆ ಮಾಡಿಕೊಳ್ಳಲಿದೆ.**

**ಖಾಲಿ ಇರುವ ಹುದ್ದೆಗಳು: ಪ್ರಾಜೆಕ್ಟ್ ಅಸೋಸಿಯೇಟ್ (12 ತಿಂಗಳಿನ ಸೇವಾ ಒಪ್ಪಂದಕ್ಕೆ ಒಳಪಟ್ಟಿರುತ್ತದೆ ಮತ್ತು ಅಗತ್ಯವಿದ್ದಲ್ಲಿ ಒಪ್ಪಂದವನ್ನು ನವೀಕರಿಸಬಹುದು). ಇದು, 12 ತಿಂಗಳು ಒಪ್ಪಂದಕ್ಕೆ ಒಳಪಟ್ಟಿರುವ ಹುದ್ದೆಯಾಗಿರುತ್ತದೆ. ಕಾರ್ಯಕ್ಷಮತೆಯ ಅನುಗುಣವಾಗಿ ಹುದ್ದೆಯ ಅವಧಿಯನ್ನು ವಿಸ್ತರಿಸಲಾಗುತ್ತದೆ ಅಥವಾ ಹುದ್ದೆಯನ್ನು ಖಾಯಂ ಮಾಡಲಾಗುತ್ತದೆ.**

**ಸ್ಥಳ: ಬೆಂಗಳೂರು ಅಥವಾ ಕರ್ನಾಟಕ ರಾಜ್ಯದ ಜಿಲ್ಲಾ ಕೇಂದ್ರಗಳು (ಚಿತ್ರದುರ್ಗ / ತುಮಕುರು)**

**ಭರ್ತಿಮಾಡುವ ಹುದ್ದೆಗಳ ಸಂಖ್ಯೆ: 2**

S3IDF-ಇಂಡಿಯಾವು ಚಿತ್ರದುರ್ಗ ಮತ್ತು ತುಮಕುರು ಜಿಲ್ಲೆಗಳಲ್ಲಿ ಎಫ್‌ಪಿಒ (ರೈತ ಉತ್ಪಾದಕರ ಸಂಘ)ಗಳನ್ನು ವ್ಯವಸ್ಥೆಗೆ ಅನುಗುಣವಾಗಿ ಬೆಳೆಯುವಂತೆ ಉತ್ತೇಜಿಸಲು ಇಬ್ಬರು ಕ್ರಿಯಾಶೀಲ ವ್ಯಕ್ತಿಗಳನ್ನು ನೇಮಕ ಮಾಡಿಕೊಳ್ಳುತ್ತಿದೆ. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ರಾಷ್ಟ್ರೀಯ ಬ್ಯಾಂಕ್ (ನಬಾರ್ಡ್ / NABARD) ಬೆಂಬಲಿತ, 3 ವರ್ಷಗಳ ಪ್ರಾಜೆಕ್ಟ್‌ಅನ್ನು ಕಾರ್ಯಗತಗೊಳಿಸಲು ಈ ಹುದ್ದೆಗಳಿಗೆ ನೇಮಕ ಮಾಡಲಾಗುತ್ತಿದೆ. ಇದು ಸಂಪೂರ್ಣ ಹೊರಾಂಗಣ ಕಾರ್ಯವಾಗಿದ್ದು ಮ್ಯಾನೆಜರ್‌ರರ ನೇರ ಮೇಲ್ವಿಚಾರಣೆಯಡಿಯಲ್ಲಿ ಬರುತ್ತದೆ. ಮ್ಯಾನೆಜರ್‌ರರು ಈ ಯೊಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಮತ್ತು S3IDF-ಇಂಡಿಯಾದ ನಿಯಮಗಳು ಮತ್ತು ನಿಬಂಧನೆಗಳಿಗನುಸಾರವಾಗಿರುವಂತೆ ನೋಡಿಕೊಳ್ಳುತ್ತಾರೆ. ಈ ಹುದ್ದೆಗೆ ನೇಮಕಗೊಳ್ಳುವವರು, S3IDF-ಇಂಡಿಯಾ ತಂಡದ ಎಲ್ಲಾ ಸದಸ್ಯರ ಸಹಕಾರದೊಂದಿಗೆ ಕೆಲಸಮಾಡಬೇಕಾಗುತ್ತದೆ. ವಿಶೇಷವಾಗಿ ಚೀಫ್ ಪ್ರೊಗ್ರಾಂ ಆಫೀಸರ್ ಅಥವಾ ಮ್ಯಾನೆಜರೊಂದಿಗೆ ಕೆಲಸಮಾಡಬೇಕಾಗುತ್ತದೆ. ಈ ಹುದ್ದೆಗಳಲ್ಲಿರುವವರು ವೇಗವಾಗಿ ಬದಲಾಗುತ್ತಿರುವ ಮತ್ತು ಕ್ರಿಯಾತ್ಮಕ ಪರಿಸರದಲ್ಲಿ, ಬಹಳಷ್ಟು ಆದ್ಯತೆಗಳು ಮತ್ತು ಬೇಡಿಕೆಗಳ ನಡುವೆ ಕೆಲಸಮಾಡಬೇಕಾಗುತ್ತದೆ. ಪ್ರಾಜೆಕ್ಟ್ ಅಸೋಸಿಯೇಟ್‌ಗಳು ಚಿತ್ರದುರ್ಗ / ತುಮಕೂರಿನಲ್ಲಿ ನೆಲಸಬೇಕಾಗುತ್ತದೆ ಮತ್ತು ಕಾರ್ಯನಿಮಿತ್ತ ಜಿಲ್ಲೆಯ ವಿವಿಧ ಭಾಗಗಳಿಗೆ ಪ್ರಯಾಣಮಾಡಬೇಕಾಗುತ್ತದೆ. ಸ್೩ಇದ್ಫ್ ನ ಬೆಂಗಳೂರಿನ ಆಫಿಸಿಗೆ ಅಗತ್ಯವಿದ್ದಾಗ ಪ್ರಯಾಣ ಮಾಡಬೇಕಾಗುತ್ತದೆ.

ಈ ಹುದ್ದೆಗೆ ಆಯ್ಕೆಯಾಗುವವರಿಗೆ ಸ್ಥಳೀಯ ಪ್ರದೇಶ, ಕೃಷಿ ಪದ್ಧತಿಗಳ ಬಗ್ಗೆ ಅರಿವು, ಬೆಳೆಗಳ ಮಾದರಿ, ರೈತ ಉತ್ಪಾದಕರ ಸಂಘದ ಅಧಿಕಾರಿಗಳೊಂದಿಗೆ ನಿಯಮಿತವಾಗಿ ಸಂಪರ್ಕ ಮತ್ತು ಸಂಹವನ ಮಾಡುವ ಖಾತಿಯಿರಬೇಕು. ಈ ಹುದ್ದೆಗೆ ಆಯ್ಕೆಯಾಗುವವರು S3IDF-ಇಂಡಿಯಾದ ಚೀಫ್ ಪ್ರೊಗ್ರಾಂ ಆಫಿಸರ್ ನೀಡುವ, ಪ್ರಾಜೆಕ್ಟ್‌ಗೆ ಸಂಬಂಧಿಸಿದ ಸೂಚನೆಗಳನ್ನು ಕಾರ್ಯಗತಗೊಳಿಸಬೇಕು. ನಿಯಮಿತವಾಗಿ ಫೀಡ್‌ಬ್ಯಾಕ್, ಕೃಷಿ-ಮಾರುಕಟ್ಟೆಯ ಪರಿಸ್ಥಿತಿಗಳು, ರೈತರೊಂದಿಗೆ ಸಂವಾದಗಳು, ಸ್ಥಳೀಯ ಎಪಿಎಮ್‌ಸಿಗಳ ಕಾರ್ಯಾಚರಣೆಗಳ ಬಗ್ಗೆ ತಿಳುವಳಿಕೆ, ಸ್ಥಳೀಯವಾಗಿ ಉಪಲಬ್ಧವಿರುವ ಕಡಿಮೆ ವೆಚ್ಚದ ತಂತ್ರಜ್ಞಾನಗಳ ಬಗ್ಗೆ ಮಾಹಿತಿ, ಸ್ಥಳಿಯ ಬ್ಯಾಂಕ್ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿರುವುದು - ಇವೇ ಮುಂತಾದವು ಈ ಹುದ್ದೆಗೆ ಆಯ್ಕೆಯಾಗುವವರ ಪ್ರಾಥಮಿಕ ಜವಾಬ್ದಾರಿಗಳಾಗಿರುತ್ತವೆ.

ಈ ಹುದ್ದೆಗಳಿಗೆ ನೇಮವಾಗ ಬಯಸುವವರು, ಚಿತ್ರದುರ್ಗ / ತುಮಕೂರಿನವರಾಗಿರಬೇಕು ಅಥವಾ ಹುದ್ದೆಯ ಪ್ರಾರಂಭದಿಂದ ಅಂತ್ಯದವರೆಗೆ ಚಿತ್ರದುರ್ಗ / ತುಮಕೂರಿಗೆ ವರ್ಗಾವಣೆಗೊಳ್ಳಲು ಸಿದ್ಧವಿರಬೇಕು. ಕಡ್ಡಾಯವಾಗಿ ಕನ್ನಡ ಮಾತನಾಡಲು, ಓದಲು ಮತ್ತು ಬರೆಯಲು ಬರಬೇಕು. ಇಂಗ್ಲಿಷಿನಲ್ಲಿ ತಕ್ಕಮಟ್ಟದ ಪಾವಿಣ್ಯತೆ ಹೊಂದಿರಬೇಕು. ಬೇರೆ ಯಾವುದೇ ಭಾಷಾ ಪ್ರಾವಿಣ್ಯತೆ ಹೆಚ್ಚುವರಿ ಪ್ರಯೋಜನವಾಗಲಿದೆ.

<u>ವಿದ್ಯಾರ್ಹತೆ, ಕೌಶಲ್ಯಗಳು ಮತ್ತು ಇತರೆ ಆವಶ್ಯಕತೆಗಳು:</u>

> ಕೃಷಿ ವಿಜ್ಞಾನದಲ್ಲಿ ಡಿಗ್ರಿ ಅಥವಾ ಡಿಪ್ಲೊಮ ಪದವಿಧರರಿಗೆ ಮೊದಲ ಆದ್ಯತೆ. ಸಮಾಜ ವಿಜ್ಞಾನದ ಪದವಿಧರರೂ ಸಹಾ

ಅರ್ಜಿ ಸಲ್ಲಿಸಬಹುದು.

>ಸ್ಥಳೀಯ ಜೀವನೋಪಾಯದ ಸಮಸ್ಯೆಗಳನ್ನು ಮತ್ತು ಸಾಮಾಜಿಕ ಉದ್ಯಮಶೀಲತೆಯ ಪರಿಸರವನ್ನು ಗ್ರಹಿಸುವ ಕೌಶಲ್ಯವುಳ್ಳವರಾಗಿರಬೇಕು.

> ತಕ್ಕಮಟ್ಟಿಗಿನ ಕಂಪ್ಯೂಟರ್ ಕೌಶಲ್ಯ ಮತ್ತು ಇಂಗ್ಲೀಷಿನಲ್ಲಿ ಮಿಂಚಂಚೆಯ ಮೂಲಕ ಪತ್ರವ್ಯವಹಾರ ಮಾಡುವುದು ತಿಳಿದಿರಬೇಕು.

> ಸ್ತ್ರೀ ಮತ್ತು ಪುರುಷ ಅಭ್ಯರ್ಥಿಗಳು ಈ ಹುದ್ದೆಗಳಿಗೆ ಅರ್ಜಿ ಹಾಕಬಹುದಾಗಿದೆ.

> ಹುದ್ದೆಗೆ ನೇಮಕ ಮಾಡುವ ಮೊದಲು, ಸ್ಥಳೀಯ ಶಿಫಾರಸುಗಳ ಅಗತ್ಯವಿರುತ್ತದೆ.

> ಹೊರಾಂಗಣ / ಫೀಲ್ಡ್‌ಗೆ ಕಡ್ಡಾಯವಾಗಿ ಪ್ರಯಾಣವಿರುತ್ತದೆ (ತಿಂಗಳಲ್ಲಿ ಕನಿಷ್ಠ 20 ದಿನ)

> ವೈಯಕ್ತಿಕ ವಿಶ್ವಾಸ, ಸ್ವತಂತ್ರವಾಗಿ ಕೆಲಸ ಮಾಡುವ ಸಾಮರ್ಥ್ಯ, ತಪ್ಪುಗಳಿಂದ ಕಲಿಯುವ ಸಾಮರ್ಥ್ಯ, ಸಮಸ್ಯೆಗಳನ್ನು ಗುರುತಿಸುವುದು, ಉತ್ತಮ ಸಂಬಂಧಗಳ ನಿರ್ಮಾಣ - ಈ ಕೌಶಲ್ಯಗಳು ನಿರ್ಣಾಯಕವಾಗಿರುತ್ತವೆ.

**<u>ಕೆಲಸದ ಅನುಭವ</u>:**

**ಕನಿಷ್ಠ 2-5 ವರ್ಷ ನಗರ/ಗ್ರಾಮೀಣ ಪ್ರದೇಶಗಳಲ್ಲಿ, ಕೃಷಿಯಾಧಾರಿತ ಜೀವನೋಪಾಯ ನಿರ್ವಹಣೆ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿದ ಅನುಭವವಿರಬೇಕು. ರೈತ ಉತ್ಪಾದಕರ ಸಂಘದೊಂದಿಗೆ ಕೆಲಸ ಮಾಡಿರುವ ಅನುಭವವೂ ಪ್ರಯೋಜನಕ್ಕೆ ಬರುತ್ತದೆ.**

**<u>ಸಂಬಳ</u>:**

**ತಿಂಗಳಿಗೆ ರೂ. 23,000/-. ಪ್ರಯಾಣದ ಮರುಪಾವತಿ ಮತ್ತು ಇತರೆ ಪಾವತಿಗಳನ್ನು ಹೆಚ್ಚುವರಿಯಾಗಿ ಭರಿಸುತ್ತೇವೆ.**

**ಇಂಗ್ಲೀಷಿನಲ್ಲಿ ವಿವರವಾದ ಬಯೋಡಾಟವನ್ನು**

**ಜೂನ್ 30, 2020ರ ಒಳಗೆ info@s3idf.org**

**ಕಳುಹಿಸಬೇಕು.**